**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ85/2023 ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **12.10.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ. **ಎಸ್.ಎನ್.ಎಸ್** ವಕೀಲರಿಂದಃ

ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಪ್ರಮಾಣ ಪತ್ರವನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿದೆ. ಅದಕ್ಕೆ ನಾನು ರುಜು ಮಾಡಿರುತ್ತೇನೆ.

ನಾನು ದಿನಾಂಕ **21.12.2020** ರ ವಚನ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-**1** ಎಂದು, ನಿಪಿ-**1** ರಲ್ಲಿರುವ ಪ್ರತಿವಾದಿಯ ಸಹಿಯನ್ನು ನಿಪಿ-**1** ಎ ಎಂದು, ಸಾಕ್ಷಿಗಳಾದ ವಿಘ್ನೇಶ ಮತ್ತು ಶಿವಕುಮಾರ ಹಾಗೂ ಬಿಕ್ಲಂ ಶಿವಶಂಕರವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**1** ಬಿ ರಿಂದ ನಿಪಿ-**1** ಡಿ ಎಂದು, ದಿನಾಂಕ **21.12.2020** ರ ಹಣ ಸಂದಾಯ ರಸೀದಿಯನ್ನು ನಿಪಿ-**2** ಎಂದು, ಸಾಕ್ಷಿಗಳಾದ ವಿಘ್ನೇಶ ಮತ್ತು ಶಿವಕುಮಾರ ಹಾಗೂ ಬಿಕ್ಲಂ ಶಿವಶಂಕರವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**2** ಬಿ ರಿಂದ ನಿಪಿ-**2** ಡಿ ಎಂದು ಗುರುತಿಸಲಾಯಿತು. ದಿನಾಂಕ **23.03.2023** ರ ನೋಟಿಸನ ಕಛೇರಿ ಪ್ರತಿಯನ್ನು ನಿಪಿ-**3** ಎಂದು, ಅಂಚೆ ರಸೀದಿಯ ಬಾಬ್ತು ಅಂಚೆ ಇಲಾಖೆಯವರು ನೀಡಿರುವ ದಾಖಲೆಯನ್ನು ನಿಪಿ-**4** ಎಂದು, ಅಂಚೆ ಸ್ವೀಕೃತಿ ರಸೀದಿಯನ್ನು ನಿಪಿ-**5** ಎಂದು, ಅಂಚೆ ರಸೀದಿಯನ್ನು ನಿಪಿ-**6** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**